**Akashvani : Bangalore**
**National Bulletins In Kannada**
**25.09.2025 / 19.35 pm**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><*<><>*><>**

ಮುಖ್ಯಾಂಶಗಳು

೧. ಆಹಾರ ವಲಯದ ಹೆಚ್ಚಿನ ವೈವಿಧ್ಯತೆ, ಬೇಡಿಕೆ ಮತ್ತು ವ್ಯಾಪ್ತಿಯಿಂದ ಭಾರತಕ್ಕೆ ಬಲ - ಪ್ರಧಾನಿ ನರೇಂದ್ರ ಮೋದಿ

೨. ರಾಜಸ್ಥಾನದಲ್ಲಿ ೧.೨೨ ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಚಾಲನೆ

೩. ೯೭ ಲಘು ಯುದ್ಧ ವಿಮಾನಗಳ ಖರೀದಿಗೆ ಹೆಚ್.ಎ.ಎಲ್ ನೊಂದಿಗೆ ರಕ್ಷಣಾ ಸಚಿವಾಲಯ ಒಪ್ಪಂದ

೪. ವೆಸ್ಟ್ ಇಂಡೀಸ್ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಗೆ ಭಾರತ ತಂಡ ಪ್ರಕಟ

೫. ಐಎಸ್‌ಎಸ್‌ಎಫ್ ಕಿರಿಯರ ಶೂಟಿಂಗ್ ವಿಶ್ವಕಪ್; ಮಹಿಳಾ ೫೦ ಮೀಟರ್ ಪ್ರೋನ್ ರೈಫಲ್ ನಲ್ಲಿ ಭಾರತದ ಅನುಷ್ಕಾಗೆ ಚಿನ್ನ

***************

ನವದೆಹಲಿಯ ಭಾರತ್ ಮಂಟಪಂನಲ್ಲಿ ಇಂದಿನಿಂದ ೪ ದಿನಗಳ ಕಾಲ ನಡೆಯುವ ವರ್ಲ್ಡ್ ಫುಡ್ ಇಂಡಿಯಾ ಕಾರ್ಯಕ್ರಮವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಕಾರ್ಯಕ್ರಮದ ಭಾಗವಾಗಿ ಪ್ರದಾನಿ ನರೇಂದ್ರ ಮೋದಿ, ಪಿಎಂಎಫ್‌ಎಂಇ ಯೋಜನೆಯಡಿ ೨ ಸಾವಿರದ ೫೧೦ ಕೋಟಿ ಮೌಲ್ಯದ ಸಣ್ಣ ಯೋಜನೆಗಳಿಗಾಗಿ ೨೬ ಸಾವಿರ ಫಲಾನುಭವಿಗಳಿಗೆ ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ವಿತರಿಸಿದರು. ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಭಾರತ ವೈವಿಧ್ಯಮಯ

ರಾಷ್ಟ್ರವಾಗಿದ್ದು, ಜಗತ್ತಿನಲ್ಲೇ ವಿಶೇಷವಾಗಿ ನಮ್ಮ ದೇಶದಲ್ಲಿ ಪ್ರತೀ ೧೦೦ ಕಿಲೋ ಮೀಟರ್ ಗೆ ಆಹಾರ ಮತ್ತು ಆಹಾರದ ರುಚಿ ಬದಲಾಗುತ್ತದೆ. ಇಲ್ಲಿ ವಿಭಿನ್ನ ರೀತಿಯ ಆಹಾರ ಪದಾರ್ಥಗಳಿಗೆ ಬೇಡಿಕೆ ಹೆಚ್ಚಿದೆ. ಈ ಬೇಡಿಕೆಯೇ ದೇಶದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ ಎಂದರು. ಭಾರತಕ್ಕೆ ಆಹಾರ ವಲಯದಲ್ಲಿ ವೈವಿಧ್ಯತೆ, ಬೇಡಿಕೆ ಮತ್ತು ವ್ಯಾಪ್ತಿಯ ಬಹುದೊಡ್ಡ ಸಾಮರ್ಥ್ಯವಿದೆ. ಈ ಸಾಮರ್ಥ್ಯಗಳಿಂದಾಗಿಯೇ ಹೂಡಿಕೆದಾರರಿಗೆ ಭಾರತ ಒಂದು ಆದ್ಯತಾ ಸ್ಥಳವಾಗಿದೆ. ದೇಶ ಸಿರಿಧಾನ್ಯಗಳ ಅತೀ ದೊಡ್ಡ ಉತ್ಪಾದಕ ರಾಷ್ಟ್ರವಾಗಿದ್ದು, ಅಕ್ಕಿ ಮತ್ತು ಗೋಧಿಯ ಉತ್ಪಾದನೆಯಲ್ಲಿ ಜಾಗತಿಕವಾಗಿ ಎರಡನೇ ಸ್ಥಾನದಲ್ಲಿದೆ. ಹಣ್ಣು, ತರಕಾರಿ ಮತ್ತು ಮೀನುಗಾರಿಕೆಯಲ್ಲಿ ದೇಶವು ಗಮನಾರ್ಹ ಕೊಡುಗೆ ನೀಡುತ್ತಿದೆ. ಜಾಗತಿಕ ಬೆಳೆ ಕೊರತೆ ಅಥವಾ ಪೂರೈಕೆ ಸರಪಳಿ ಅಡಚಣೆಗಳ ಸಂದರ್ಭದಲ್ಲಿ ಭಾರತ ವಿಶ್ವಾಸಾರ್ಹವಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ ಎಂದು ಹೇಳಿದರು. **ಧ್ವನಿ : ಪ್ರಧಾನಿ ನರೇಂದ್ರ ಮೋದಿ**

ಕಾರ್ಯಕ್ರಮದಲ್ಲಿ ರಷ್ಯಾ ಉಪಪ್ರಧಾನಿ ದಿಮಿತ್ರಿ ಪಾತ್ರು ಶೇವ್, ಹಾಗೂ ೨೧ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ವರ್ಲ್ಡ್ ಫುಡ್ ಇಂಡಿಯಾದ ೪ನೇ ಆವೃತ್ತಿಯು ವೈವಿಧ್ಯಮಯ ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಹೂಡಿಕೆಗಳನ್ನು ಉತ್ತೇಜಿಸುವ ಜೊತೆಗೆ ಭಾರತದ ಶ್ರೀಮಂತ ಆಹಾರ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವ ಗುರಿಯನ್ನು ಹೊಂದಿದೆ.

***************

ರಾಜಸ್ಥಾನದ ಬನ್ಸ್ವಾರಾದಲ್ಲಿ ೧.೨೨ ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಇಂದು ಉದ್ಘಾಟನೆ ಮತ್ತು ಶಿಲಾನ್ಯಾಸ ನೆರವೇರಿಸಿದರು. ಮಾಹಿ ಅಣೆಕಟ್ಟಿನ ಬಳಿಯ ನಾಪ್ಲಾದಲ್ಲಿ ಮಾಹಿ ಬನ್ಸ್ವಾರಾ ರಾಜಸ್ಥಾನ ಪರಮಾಣು ವಿದ್ಯುತ್ ಯೋಜನೆಗೆ ಅವರು ಶಿಲಾನ್ಯಾಸ ನೆರವೇರಿಸಿದರು. ಸುಮಾರು ೪೨ ಸಾವಿರ ಕೋಟಿ ರೂಪಾಯಿಗಳ ಹೂಡಿಕೆಯೊಂದಿಗೆ ಈ ಯೋಜನೆಯು ತಲಾ ೭೦೦ ಮೆಗಾವ್ಯಾಟ್

ಸಾಮರ್ಥ್ಯದ ನಾಲ್ಕು ಪರಮಾಣು ವಿದ್ಯುತ್ ಘಟಕಗಳನ್ನು ಒಳಗೊಂಡಿರುತ್ತದೆ. ಸೌರಶಕ್ತಿ, ಕುಡಿಯುವ ನೀರು, ಆರೋಗ್ಯ ರಕ್ಷಣೆ, ಮೂಲಸೌಕರ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಕ್ಷೇತ್ರಗಳಲ್ಲಿ ಹಲವಾರು ಯೋಜನೆಗಳಿಗೆ ಹಾಗೂ ಮೂರು ಹೊಸ ರೈಲು ಸೇವೆಗಳಿಗೆ ಪ್ರಧಾನಿ ಚಾಲನೆ ನೀಡಿದರು. ಬಳಿಕ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಜಿಎಸ್‌ಟಿ ಪರಿಷ್ಕರಣೆ ಬಳಿಕ ದಿನನಿತ್ಯದ ಅಗತ್ಯ ವಸ್ತುಗಳು ಅಗ್ಗವಾಗಿದ್ದು, ಮನೆಯ ವೆಚ್ಚಗಳು ಕಡಿಮೆಯಾಗಿವೆ ಎಂದರು. ಸ್ವದೇಶಿ ಉತ್ಪನ್ನಗಳನ್ನು ಭಾರತದ ಜನರ ಬೆವರು ಮತ್ತು ಶ್ರಮದಿಂದ ಉತ್ಪಾದಿಸುವ ಸರಕು ಎಂದು ವ್ಯಾಖ್ಯಾನಿಸಿದ ಅವರು, ಸ್ವದೇಶಿಯನ್ನು ಅಳವಡಿಸಿಕೊಳ್ಳುವುದು ಹೆಮ್ಮೆಯ ವಿಷಯವಾಗಬೇಕು ಎಂದು ಒತ್ತಿ ಹೇಳಿದರು. ಆತ್ಮನಿರ್ಭರ ಭಾರತದ ಧ್ಯೇಯ ಸ್ವದೇಶಿ ಮಂತ್ರದೊಂದಿಗೆ ಸಾಕಾರಗೊಳ್ಳುತ್ತದೆ ಎಂದ ಅವರು ನಾಗರಿಕರು ಸ್ವದೇಶಿ ಉತ್ಪನ್ನಗಳನ್ನು ಖರೀದಿಸಿ ಪ್ರಚಾರ ಮಾಡುವಂತೆ ಕರೆ ನೀಡಿದರು.

***************

೯೭ ಲಘು ಯುದ್ಧ ವಿಮಾನ ಎಂಕೆ-೧-ಎ ಯುದ್ಧ ವಿಮಾನಗಳನ್ನು ಖರೀದಿಗಾಗಿ ರಕ್ಷಣಾ ಸಚಿವಾಲಯ, ಎಚ್‌ಎಎಲ್ ನೊಂದಿಗೆ ೬೨ ಸಾವಿರದ ೩೭೦ ಕೋಟಿ ರೂಪಾಯಿ ಮೌಲ್ಯದ ಒಪ್ಪಂದ ಮಾಡಿಕೊಂಡಿದೆ. ಇದರಲ್ಲಿ ೬೮ ಯುದ್ಧ ವಿಮಾನಗಳು ಮತ್ತು ೨೯ ಅವಳಿ ಆಸನಗಳ ವಿಮಾನಗಳು ಮತ್ತು ಭಾರತೀಯ ವಾಯುಪಡೆಗೆ ಸಂಬಂಧಿಸಿದ ಉಪಕರಣಗಳು ಸೇರಿವೆ. ಈ ವಿಮಾನಗಳ ವಿತರಣೆ ೨೦೨೭-೨೮ ರಲ್ಲಿ ಪ್ರಾರಂಭವಾಗಲಿದ್ದು, ಆರು ವರ್ಷಗಳ ಅವಧಿಯಲ್ಲಿ ಪೂರ್ಣಗೊಳ್ಳಲಿದೆ. ಉತ್ತಮ್ ಆಕ್ಟಿವ್ ಎಲೆಕ್ಟ್ರಾನಿಕ್ ಸ್ಕ್ಯಾನ್ಡ್ ಅರೇ ರೆಡಾರ್, ಸ್ವಯಂ ರಕ್ಷಾ ಕವಚ ಮತ್ತಿತರ ಸುಧಾರಿತ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ವ್ಯವಸ್ಥೆಗಳ ಸಂಯೋಜನೆ ಆತ್ಮನಿರ್ಭರ್ ಉಪಕ್ರಮಗಳನ್ನು ಮತ್ತಷ್ಟು ಬಲಪಡಿಸುತ್ತದೆ. ಒಪ್ಪಂದದಡಿ ಕೈಗೊಳ್ಳುವ ಉತ್ಪಾದನೆ, ಆರು ವರ್ಷಗಳ ಅವಧಿಗೆ ವರ್ಷಕ್ಕೆ ೧೧ ಸಾವಿರಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಗಳನ್ನು

ಸೃಷ್ಟಿಸುವ ನಿರೀಕ್ಷೆಯಿದೆ, ಇದು ದೇಶೀಯ ಏರೋಸ್ಪೇಸ್ ಪರಿಸರ ವ್ಯವಸ್ಥೆಗೆ ಪ್ರಮುಖ ಉತ್ತೇಜನ ನೀಡುತ್ತದೆ ಎಂದು ಸಚಿವಾಲಯ ತಿಳಿಸಿದೆ.

***************

ಭಾರತ ನಿರೀಕ್ಷೆಗಿಂತ ಆರು ವರ್ಷ ಮುಂಚಿತವಾಗಿಯೇ ಶೇಕಡಾ ೨೦ ರಷ್ಟು ಜೈವಿಕ ಇಂಧನ ಮಿಶ್ರಣದ ಗುರಿಯನ್ನು ಸಾಧಿಸಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ವಿಶ್ವ ಹೈಡ್ರೋಜನ್ ಇಂಡಿಯಾ ಶೃಂಗಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ೨೦೩೦ ರ ವೇಳೆಗೆ ೫ ಮಿಲಿಯನ್ ಟನ್ ಹಸಿರು ಜಲಜನಕ ಉತ್ಪಾದನಾ ಸಾಮರ್ಥ್ಯವನ್ನು ಸಾಧಿಸುವ ಗುರಿಯನ್ನು ಭಾರತ ಹೊಂದಿದ ಎಂದು ಹೇಳಿದರು. ಹಸಿರು ಜಲಜನಕ ಭವಿಷ್ಯದ ಇಂಧನವಾಗಿದೆ ಮತ್ತು ಸ್ಥಳೀಯ ಬೇಡಿಕೆ, ಉತ್ಪಾದನೆ ಮತ್ತು ಬಳಕೆ ಇರುವಲ್ಲಿ ಅದು ಯಶಸ್ವಿಯಾಗುತ್ತದೆ ಎಂದು ತಿಳಿಸಿದರು. ವರ್ಚುವಲ್ ಮೂಲಕ ಮಾತನಾಡಿದ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ, ೨೦೩೦ ರವೇಳೆಗೆ ತನ್ನ ಸ್ಥಾಪಿತ ವಿದ್ಯುತ್ ಸಾಮರ್ಥ್ಯದ ಶೇಕಡ ೫೦ ರಷ್ಟನ್ನು ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ಹೊಂದುವ ಗುರಿಯನ್ನು ಐದು ವರ್ಷ ಮುಂಚಿತವಾಗಿ ಭಾರತ ಸಾಧಿಸಿದೆ ಎಂದು ಹೇಳಿದರು. ೨೦೨೩ರಲ್ಲಿ ಆರಂಭಿಸಲಾದ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಅನ್ನು ೨.೨ ಶತಕೋಟಿ ಡಾಲರ್‌ಗಳ ವೆಚ್ಚದೊಂದಿಗೆ ಬೆಂಬಲಿಸಲಾಗಿದೆ ಎಂದ ಸಚಿವರು, ಭಾರತದ ಹಸಿರು ಹೈಡ್ರೋಜನ್ ವಲಯದಲ್ಲಿ ಹೂಡಿಕೆ ಮಾಡಲು ಜಾಗತಿಕ ನಾಯಕರನ್ನು ಆಹ್ವಾನಿಸಿದರು.

***************

ಮೇಕ್ ಇನ್ ಇಂಡಿಯಾ ಉಪಕ್ರಮ ಜಾರಿಗೆ ಬಂದು ಇಂದಿಗೆ ೧೧ ವರ್ಷ ಪೂರೈಸಿದೆ. ಭಾರತದ ಆರ್ಥಿಕತೆ ಮತ್ತು ಉದ್ಯಮ ಪರಿಸರ ವ್ಯವಸ್ಥೆಯ ಮೇಲೆ ಈ ಉಪಕ್ರಮದ ಪರಿವರ್ತನಾತ್ಮಕ ಪರಿಣಾಮದ ಕುರಿತು ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ, ದೇಶದ ಬೆಳವಣಿಗೆಗೆ ವೇಗ ನೀಡುವ ಮತ್ತು ಸಾಮರ್ಥ್ಯವನ್ನು ಬಳಸಿಕೊಳ್ಳುವ ದೃಷ್ಟಿಕೋನದೊಂದಿಗೆ ಮೇಕ್ ಇನ್ ಇಂಡಿಯಾ ಉಪಕ್ರಮವನ್ನು ಪ್ರಾರಂಭಿಸಲಾಗಿತ್ತು ಎಂದು ಹೇಳಿದರು.

***************

ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮದಿನವಾದ ಇಂದು ಅವರಿಗೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಆನೇಕ ಗಣ್ಯರು ಗೌರವನಮನ ಸಲ್ಲಿಸಿದ್ದಾರೆ.

***************

ಸರ್ಕಾರಿ ಇ-ಮಾರುಕಟ್ಟೆ - ಜೆಮ್ ಇಂದು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಮತ್ತು ನೇರ್ಪಡೆಯನ್ನು ಬಲಪಡಿಸಲು 'ಜೆಮ್ ಹೇಳಿದ್ದನ್ನು ಕೇಳಿ, ಎಚ್ಚರಿಕೆ ವಹಿಸಿ, ಜವಾಬ್ದಾರರಾಗಿ' ಎಂಬ ಅಭಿಯಾನವನ್ನು ಪ್ರಾರಂಭಿಸಿದೆ.

***************

ಅಕ್ಟೋಬರ್ ಎರಡರಿಂದ ಆರಂಭವಾಗುವ ವೆಸ್ಟ್ ಇಂಡೀಸ್ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಗೆ ಬಿಸಿಸಿಐ ತಂಡ ಪ್ರಕಟಿಸಿದೆ. ಶುಭ್‌ಮನ್ ಗಿಲ್ ನಾಯಕತ್ವದ ೧೫ ಆಟಗಾರರ ತಂಡದಲ್ಲಿ

ರವೀಂದ್ರ ಜಡೇಜ ಅವರನ್ನು ಉಪನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಕನ್ನಡಿಗರಾದ ದೇವದತ್ತ ಪಡಿಕ್ಕಲ್ ಕೆ.ಎಲ್. ರಾಹುಲ್ ಪ್ರಸಿದ್ಧ್ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಈ ಬಾರಿ ಧ್ರುವ್ ಜುರೆಲ್ ಹಾಗೂ ಎನ್. ಜಗದೀಸನ್ ಅವರನ್ನು ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲಾಗಿದೆ.

೨೫-೦೯-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ವರ್ಲ್ಡ್ ಫುಡ್ ಇಂಡಿಯಾ

ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ರಾಜ್ಯ ಸಚಿವ ಪ್ರೊಫೆಸರ್ ಎಸ್.ಪಿ. ಸಿಂಗ್ ಬಘೇಲ್ ಇಂದು ನವದೆಹಲಿಯಲ್ಲಿ ನಡೆದ ವರ್ಲ್ಡ್ ಫುಡ್ ಇಂಡಿಯಾ ೨೦೨೫ ರಲ್ಲಿ ಫಿಶ್ ಟೆಕ್ ಪೆವಿಲಿಯನ್ ಅನ್ನು ಉದ್ಘಾಟಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ೬೦ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ರಫ್ತು ಹೊಂದಿರುವ ಭಾರತ ವಿಶ್ವದ ಎರಡನೇ ಅತಿದೊಡ್ಡ ಮೀನು ಉತ್ಪಾದನೆಯ ದೇಶಗಳಲ್ಲಿ ಒಂದಾಗಿದೆ ಎಂದು ಹೇಳಿದರು.

***************

ಅಕ್ಟೋಬರ್ ಎರಡರಿಂದ ಆರಂಭವಾಗುವ ವೆಸ್ಟ್ ಇಂಡೀಸ್ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಗೆ ಬಿಸಿಸಿಐ ತಂಡ ಪ್ರಕಟಿಸಿದೆ. ಶುಭ್‌ಮನ್ ಗಿಲ್ ನಾಯಕತ್ವದ ೧೫ ಆಟಗಾರರ ತಂಡದಲ್ಲಿ ರವೀಂದ್ರ ಜಡೇಜ ಅವರನ್ನು ಉಪನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಕನ್ನಡಿಗರಾದ ದೇವದತ್ತ ಪಡಿಕ್ಕಲ್ ಕೆ.ಎಲ್. ರಾಹುಲ್ ಪ್ರಸಿದ್ಧ್ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಈ ಬಾರಿ

ಧ್ರುವ್ ಜುರೆಲ್ ಹಾಗೂ ಎನ್. ಜಗದೀಸನ್ ಅವರನ್ನು ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲಾಗಿದೆ.

***************

ನವದೆಹಲಿಯ ಡಾಕ್ಟರ್ ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆದ ಐಎಸ್‌ಎಸ್‌ಎಫ್ ಕಿರಿಯರ್ ವಿಶ್ವಕಪ್ ೨೦೨೫ರಲ್ಲಿ ಇಂದು ಮಹಿಳೆಯರ ೫೦ ಮೀಟರ್ ಪ್ರೋನ್ ರೈಫಲ್ ಸ್ಪರ್ಧೆಯಲ್ಲಿ ಭಾರತ ಎಲ್ಲಾ ೩ ಪದಕಗಳನ್ನು ಗೆದ್ದುಕೊಂಡಿದೆ. ಸ್ಪರ್ಧೆಯಲ್ಲಿ ಭಾರತದ ಅನುಷ್ಕಾ ಚಿನ್ನ ಗೆದ್ದರೆ, ಅನ್ನಿಕಾ ಬೆಳ್ಳಿ ಹಾಗೂ ಆಧ್ಯಾ ಅಗರ್ವಾಲ್ ಕಂಚಿನ ಪದಕ ಪಡೆದರು. ಪುರುಷರ ವಿಭಾಗದಲ್ಲಿ ಭಾರತದ ದಿಪೇಂದ್ರ ಸಿಂಗ್ ಶಕಾವತ್ ಬೆಳ್ಳಿ ಪದಕ ಗೆದ್ದರೆ, ರೋಹಿತ್ ಕನ್ಯಾನ್ ಕಂಚು ಪದಕ ಪಡೆದರು.

***************

ವಿಳಂಬ ಕಡಿಮೆ ಮಾಡುವ ಜೊತೆಗೆ ಸ್ಪಷ್ಟತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಂಚೆ ಮತಪತ್ರಗಳ ಎಣಿಕೆ ಪ್ರಕ್ರಿಯೆಯನ್ನು ಮತ್ತಷ್ಟು ಸುಗಮಗೊಳಿಸಲು ಚುನಾವಣಾ ಆಯೋಗ ನಿರ್ಧರಿಸಿದೆ. ಎಣಿಕೆ ಕೇಂದ್ರದಲ್ಲಿ ಅಂಚೆ ಮತಪತ್ರಗಳ ಎಣಿಕೆ ಪೂರ್ಣಗೊಂಡ ನಂತರವೇ ಅಂತಿಮ ಅಥವಾ ಎರಡನೇ ಕೊನೆಯ ಸುತ್ತಿನ ಇವಿಎಂ ಅಥವಾ ವಿವಿಪ್ಯಾಟ್ ಎಣಿಕೆಯನ್ನು ಕೈಗೊಳ್ಳಲಾಗುತ್ತದೆ ಎಂದು ಆಯೋಗ ಹೇಳಿಕೆಯಲ್ಲಿ ತಿಳಿಸಿದೆ.

***************

ದೇಶಾದ್ಯಂತ ಇಂದಿನಿಂದ ಆತ್ಮನಿರ್ಭರ ಭಾರತ ಮತ್ತು ಹರ್ ಘರ್ ಸ್ವದೇಶಿ ಅಭಿಯಾನವನ್ನು ಬಿಜೆಪಿ ಪ್ರಾರಂಭಿಸಿದೆ. ನವದೆಹಲಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ದಿನಾಚರಣೆಯಾದ ಡಿಸೆಂಬರ್ ೨೫ ರವರೆಗೆ ಈ ಅಭಿಯಾನ ಮುಂದುವರಿಯಲಿದೆ ಎಂದು ಘೋಷಿಸಿದರು.

***************

ಜಾರ್ಖಂಡ್‌ನಲ್ಲಿ, ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಚೈಬಾಸಾದಲ್ಲಿ ಯುವ ಮಹಿಳಾ ನಕ್ಸಲರು ಸೇರಿದಂತೆ ಹತ್ತು ಮಾವೋವಾದಿಗಳು ಇಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅನುರಾಗ್ ಗುಪ್ತಾ ಅವರೆದುರು ಶರಣಾದರು. ಈ ಸಂದರ್ಭದಲ್ಲಿ ಮಾತನಾಡಿದ ಅನುರಾಗ್ ಗುಪ್ತಾ, ರಾಜ್ಯ ಸರ್ಕಾರದ ಶರಣಾಗತಿ ನೀತಿಯಡಿ ನಕ್ಸಲರನ್ನು ಮತ್ತೆ ಮುಖ್ಯವಾಹಿನಿಗೆ ತರುತ್ತಿರುವುದು ರಾಜ್ಯ ಪೊಲೀಸರ ದೊಡ್ಡ ಸಾಧನೆಗಳಲ್ಲಿ ಒಂದಾಗಿದೆ. ೨೦೨೫ರ ಡಿಸೆಂಬರ್ ೩೧ರೊಳಗೆ ನಕ್ಸಲರನ್ನು ರಾಜ್ಯದಿಂದ ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗುವುದು ಎಂದು ಹೇಳಿದರು.

***************